**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ: DTE-ADMI0SCH1/10/2021

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ ಬೆಂಗಳೂರು-560 001.
ದಿನಾಂಕ: 05-03-2022.

**-:: ಸುತ್ತೋಲೆ ::-**

**ವಿಷಯ :** 2021-22ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು **https://dtetech.karnataka.gov.in/dteone/emp/Login.aspx**ರಲ್ಲಿ ಅಪ್ಲೋಡ್ ಮಾಡುವ ಬಗ್ಗೆ.

**-0000000-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳು ವಿವಿಧ ಯೋಜನೆಗಳ ವಿದ್ಯಾರ್ಥಿವೇತನಕ್ಕಾಗಿ State Scholarship Portal ಮೂಲಕ ಅರ್ಜಿಗಳನ್ನು ಸಲ್ಲಿಸಲು, ವಿದ್ಯಾರ್ಥಿಗಳ ಪೂರ್ಣ ಮಾಹಿತಿಯನ್ನು ಎಸ್.ಎಸ್.ಪಿ ತಂತ್ರಾಂಶಕ್ಕೆ ನೀಡಬೇಕಾಗಿರುತ್ತದೆ. ಈ ಹಿನ್ನೆಯಲ್ಲಿ 2021-22ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ 01, 02 ಮತ್ತು 03ನೇ ವರ್ಷಕ್ಕೆ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳ Profile Data, SSP I.D number ಹಾಗೂ ಪಾವತಿಸಿರುವ ಶುಲ್ಕದ ವಿವರಗಳನ್ನು ಇಲಾಖೆಯ Admission Portal **https://dtetech.karnataka.gov.in/dteone/emp/Login.aspx**ರಲ್ಲಿ **ದಿನಾಂಕ: 10-03-2022**ರ ಒಳಗಾಗಿ ತಪ್ಪದೇ ಖಡ್ಡಾಯವಾಗಿ ಭರ್ತಿ ಮಾಡಲು ತಿಳಿಸಲಾಗಿದೆ.

ಮುಂದುವರೆದು, ವಿವರಗಳನ್ನು ಅಪ್ಲೋಡ್ ಮಾಡಿದ ನಂತರ ಸಿದ್ದಗೊಳ್ಳುವ Report ನ್ನು ಸಂಸ್ಥೆಯ ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರು ಅಥವಾ ಈ ಕಾರ್ಯಕ್ಕಾಗಿ ನಿಯೋಜಿತಗೊಂಡಿರುವ ಅಧಿಕಾರಿ/ಸಿಬ್ಬಂಧಿ ವರ್ಗದವರುಗಳು ವಿದ್ಯಾರ್ಥಿಗಳ ಹೆಸರು, BTE ರಿಜಿಸ್ಟರ್ ಸಂಖ್ಯೆ, ಎಸ್.ಎಸ್.ಪಿ ಐ.ಡಿ, ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ, ಪ್ರವರ್ಗದ ವಿವರ ಹಾಗೂ ಇತರೇ ನಮೂದುಗಳನ್ನು ತಪ್ಪದೇ ಖುದ್ದು ಪರಿಶೀಲಿಸಲು ಸೂಚಿಸಲಾಗಿದೆ. ಪರಿಶೀಲಿಸಿದ ನಂತರ ಯಾವುದೇ ತಿದ್ದುಪಡಿಗಳಿದ್ದಲ್ಲಿ ಅವುಗಳನ್ನು ಸಂಸ್ಥೆಯ ಹಂತದಲ್ಲಿ ಸರಿಪಡಿಸಲು ಅವಕಾಶವಿರುವುದಿಲ್ಲವಾದ್ದರಿಂದ ಸದರಿ ತಿದ್ದುಪಡಿಗಳನ್ನು ದಿನಾಂಕ: 14-03-2022ರೊಳಗೆ ಇ-ಮೇಲ್ ವಿಳಾಸ dctesuportkarnataka@gmail.com ಗೆ ಕಳುಹಿಸಲು ಸೂಚಿಸಿದೆ. ವಿದ್ಯಾರ್ಥಿಗಳ ದತ್ತಾಂಶವು ಅತ್ಯಂತ ತುರ್ತು ಅಗತ್ಯತೆ ಇರುವುದರಿಂದ ಮೇಲ್ಕಂಡ ಕಾರ್ಯಗಳನ್ನು ಸಂಸ್ಥೆಯ ಪ್ರಾಂಶುಪಾಲರನ್ನು ಒಳಗೊಂಡು ಇತರೇ ಎಲ್ಲಾ ಅಧಿಕಾರಿ ಸಿಬ್ಬಂದಿ ವರ್ಗದವರು ತಮ್ಮ ದೈನಂದಿನ ಕಛೇರಿ ಕೆಲಸದೊಂದಿಗೆ ಹಾಗೂ ಕಛೇರಿಯ ಅವಧಿ

ಮುಗಿದ ನಂತರವು ವಿದ್ಯಾರ್ಥಿಗಳ ಮಾಹಿತಿಯನ್ನು ದತ್ತಾಂಶದಲ್ಲಿ ನಿಗಧಿತ ಅವಧಿಯೊಳಗೆ ಅಪ್ಲೋಡ್ ಮಾಡಿ, ವಿವರಗಳು ಆಯುಕ್ತಲಾಯಕ್ಕೆ ತಲುಪುವಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ವಿದ್ಯಾರ್ಥಿಗಳ ದತ್ತಾಂಶವನ್ನು ಮೇಲೆ ನೀಡಿರುವ ಅವಧಿಯ ಒಳಗಾಗಿ ನಮೂದಿಸದೇ, ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಯಾವುದೇ ತೊಂದರೆಗಳು ಉಂಟಾದಲ್ಲಿ ಇದಕ್ಕೆ ಕಾರಣರಾದ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಮಗೆ ತಿಳಿಯಪಡಿಸಿದೆ.

05/03/2022

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು**

05/03

**ಇವರಿಗೆ,**

1. **ಪ್ರಾಂಶುಪಾಲರು,** ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್.
2. **ಸಂಯೋಜನಾಧಿಕಾರಿಗಳು,** ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).
3. ಹೆಚ್ಚುವರಿ ಪ್ರತಿ.